# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916
(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)
(ಎನ್.ಐ.ಆರ್.ಎಫ್-2024 ರಾಜ್ಯ ಸಾರ್ವಜನಿಕ ವಿಶ್ವವಿದ್ಯಾನಿಲಯ ವರ್ಗದಲ್ಲಿ 54ನೇ ಸ್ಥಾನ, ಮತ್ತು ಒಟ್ಟಾರೆ ವರ್ಗದಲ್ಲಿ 86ನೇ ಸ್ಥಾನ)

ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ
ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570 005

ಸಂಖ್ಯೆ: ಪವಿ/8.6/07/ಅಧಿಸೂಚನೆ/2010-11(1) ದಿನಾಂಕ: 22-09-2026

## ಅಧಿಸೂಚನೆ

ವಿಷಯ: ನವೆಂಬರ್/ಡಿಸೆಂಬರ್-2026ರಲ್ಲಿ ಜರುಗಲಿರುವ **1, 3 ಮತ್ತು 5ನೇ** ಸೆಮಿಸ್ಟರ್‌ನ **(SEP ಪದ್ಧತಿಯ)** ಸ್ನಾತಕ ಪದವಿಯ ಬಿ.ಕಾಂ (AEDP - Retail Operation, Banking Financial Services & Logistics) ಪರೀಕ್ಷೆಯ ಬಗ್ಗೆ.

ಉಲ್ಲೇಖ: 1. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ಅಧಿಸೂಚನೆ ಸಂಖ್ಯೆ:ಎಸಿ7(ಎ)/29/2025-26, ದಿನಾಂಕ:05-08-2026 (ಶೈಕ್ಷಣಿಕ ವೇಳಾಪಟ್ಟಿಗೆ ಸಂಬಂಧಿಸಿರುವುದು).

2. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ಅಧಿಸೂಚನೆ ಸಂಖ್ಯೆ:ಎಸಿ2(ಎಸ್)/225/2025-26, ದಿನಾಂಕ:09-04-2026 (ಪರೀಕ್ಷಾ ಶುಲ್ಕಗಳಿಗೆ ಸಂಬಂಧಿಸಿರುವುದು).

******

ನವೆಂಬರ್/ಡಿಸೆಂಬರ್-2026ರ ಮಾಹೆಯಲ್ಲಿ ನಡೆಯಲಿರುವ **1, 3 ಮತ್ತು 5ನೇ** ಸೆಮಿಸ್ಟರ್‌ನ **(SEP ಪದ್ಧತಿಯ)** ಸ್ನಾತಕ ಪದವಿ ಪರೀಕ್ಷೆಯಾದ ಬಿ.ಕಾಂ (AEDP - Retail Operation, Banking Financial Services & Logistics) ಪರೀಕ್ಷೆಗಳು **ದಿನಾಂಕ: 06-11-2026**ರಿಂದ ಪ್ರಾರಂಭವಾಗಲಿದೆ, ಈ ಸಂಬಂಧದ ವಿವರಗಳು ಕೆಳಕಂಡಂತಿರುತ್ತದೆ;

| ಕ್ರ.ಸಂ | ವಿವರಗಳು | ಅಂತಿಮ ದಿನಾಂಕ |
|---|---|---|
| 1 | ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕಗಳನ್ನು ಆನ್‌ಲೈನ್ ಮುಖಾಂತರ ಪಾವತಿಸಿ ಹಾಗೂ ಶುಲ್ಕ ಪಾವತಿಸಿದ ನಂತರ ಪರೀಕ್ಷಾ ಅರ್ಜಿಗಳನ್ನು ಕಾಲೇಜಿಗೆ ಸಲ್ಲಿಸಲು (ವಿದ್ಯಾರ್ಥಿಗಳು UUCMS ಅಡಿಯಲ್ಲಿ ಪರೀಕ್ಷಾ ಶುಲ್ಕಗಳನ್ನು ಪಾವತಿಸುವ ಸಂದರ್ಭದಲ್ಲಿ ತಮ್ಮ ಕೋರ್ಸಿನ AEC/Languages, SEC ಮತ್ತು Open Elective ಪತ್ರಿಕೆಗಳನ್ನು ಪರಿಶೀಲಿಸಿ ಆಯ್ಕೆ ಮಾಡಿಕೊಳ್ಳುವುದು). | **06.10.2026** |
| 2 | ರೂ.100/-ಗಳ ದಂಡ ಶುಲ್ಕದೊಂದಿಗೆ ಪರೀಕ್ಷಾ ಶುಲ್ಕ ಪಾವತಿಸಲು **(with 1st penalty)** | **07.10.2026** |
| 3 | ರೂ.200/-ಗಳ ದಂಡ ಶುಲ್ಕದೊಂದಿಗೆ ಪರೀಕ್ಷಾ ಶುಲ್ಕ ಪಾವತಿಸಲು **(with 2nd & last penalty)** | **08.10.2026** |
| 4 | ಕಾಲೇಜಿನವರು ವಿದ್ಯಾರ್ಥಿಗಳು ಪಾವತಿಸಿರುವ ಪರೀಕ್ಷಾ ಶುಲ್ಕಗಳ ಮಾಹಿತಿಯನ್ನು ಕ್ರೋಢೀಕರಿಸಿ ಈ ಕಛೇರಿಗೆ ಸಲ್ಲಿಸುವ ದಿನಾಂಕ | **12.10.2026** |
| 5 | ಕಾಲೇಜಿನವರು ಪ್ರವೇಶ ಪತ್ರಗಳನ್ನು ಮುದ್ರಿಸಿಕೊಳ್ಳುವ ದಿನಾಂಕ | **14.10.2026** |
| 6 | ಪ್ರಾಯೋಗಿಕ ಪರೀಕ್ಷೆಗಳನ್ನು ಪ್ರಾರಂಭಿಸಿ ಹಾಗೂ ಪೂರ್ಣಗೊಳಿಸುವ ದಿನಾಂಕ | **15.10.2026 ರಿಂದ 29.10.2026** |
| 7 | **$C_1$ & $C_2$** (continuous assessment) ಅಂಕಗಳನ್ನು ಹಾಗೂ ತರಗತಿ ಹಾಜರಾತಿಗಳನ್ನು ಆನ್‌ಲೈನ್ ಮೂಲಕ ನಮೂದಿಸಲು ಕೊನೆಯ ದಿನಾಂಕ | **28.10.2026** |
| 8 | ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ | **06.11.2026** |

ಸೂಚನೆಗಳು:

1. **1, 3 ಮತ್ತು 5ನೇ** ಸೆಮಿಸ್ಟರ್‌ನ **(SEP ಪದ್ಧತಿಯ)** ಪರೀಕ್ಷಾ ಕಾರ್ಯಗಳು UUCMS ಅಡಿಯಲ್ಲಿರುವುದರಿಂದ ಕಾಲೇಜಿನ ವತಿಯಿಂದ "academic moduleನಲ್ಲಿ curiculam mapping" ಮಾಡಿದ ನಂತರ, ವಿದ್ಯಾರ್ಥಿಗಳು ಆನ್‌ಲೈನ್ (UUCMS) ಮೂಲಕ ಪತ್ರಿಕೆಗಳನ್ನು ಆಯ್ಕೆ ಮಾಡಿಕೊಂಡು "mapping" ಮಾಡಲು ಕಾಲೇಜಿನವರು QP Code/Course Code ಗಳನ್ನು ನೀಡಬೇಕು ಹಾಗೂ ಆನ್‌ಲೈನ್ ಮೂಲಕ ಪರೀಕ್ಷಾ ಶುಲ್ಕ ಪಾವತಿಸಲು ಮಾರ್ಗದರ್ಶನ ನೀಡುವುದು.
2. **ಎಲ್ಲಾ ಪ್ರಾಯೋಗಿಕ ಪರೀಕ್ಷೆಗಳನ್ನು ದಿನಾಂಕ: 29.10.2026ರೊಳಗೆ ಪೂರ್ಣಗೊಳಿಸುವುದು.**
3. **ಪ್ರಾಯೋಗಿಕ ಪರೀಕ್ಷೆಗಳು ಮುಗಿದ ನಂತರ ಆ ದಿನದಂದೇ Online ಮುಖಾಂತರ ಅಂಕಗಳನ್ನು ಕಡ್ಡಾಯವಾಗಿ ನಮೂದಿಸುವುದು ಹಾಗೂ ಅಂಕಗಳ ಮೂಲಪ್ರತಿಯನ್ನು ಈ ಕಛೇರಿಗೆ ಸಲ್ಲಿಸುವುದು.**
4. **ಕಾಲೇಜಿನ ಆಡಳಿತ ವರ್ಗ ಹಾಗೂ ಸಿಬ್ಬಂದಿ, ವಿದ್ಯಾರ್ಥಿಗಳು ಭರ್ತಿ ಮಾಡಿದ ವಿಷಯಗಳ ಆಯ್ಕೆ (subject selection) ಹಾಗೂ ಪರೀಕ್ಷಾ ಅರ್ಜಿಗಳಲ್ಲಿ ನ್ಯೂನತೆಗಳಿದ್ದರೆ,** (ಪ್ರವೇಶ ಪತ್ರಗಳ ಮುದ್ರಣಕ್ಕೆ ಸಂಬಂಧಿಸಿದಂತೆ, ಪ್ರಾಂಶುಪಾಲರ ಅನುಮೋದನೆ ಪಡೆಯುವ ಮೊದಲು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡಿರುವ ಪತ್ರಿಕೆಗಳನ್ನು ಪುನಃ ಪರಿಶೀಲಿಸಿಕೊಳ್ಳುವುದು, **ಇಲ್ಲದಿದ್ದರೆ ಕಾಲೇಜಿನ ಪ್ರಾಂಶುಪಾಲರು ಇಂತಹ ತಪ್ಪುಗಳಿಗೆ ಹೊಣೆಗಾರರಾಗಿರುತ್ತಾರೆ**).

## ಪರೀಕ್ಷಾ ಶುಲ್ಕಗಳ ದರಗಳು

| | | |
|---|---|---|
| 1. | **B.Com :** (AEDP - Retail Operation, Banking Financial Services & Logistics) | |
| | a) I & III Semester whole Examination | **Rs.1,760/-** |
| | Per paper with Practical | **Rs. 1,300/-** |
| | Per paper without Practical | **Rs. 1,110/-** |
| | b) V Semester whole Examination | **Rs.2,025/-** |
| | Per paper with Practical | **Rs. 1,300/-** |
| | Per paper without Practical | **Rs. 1,110/-** |

***Subject to a maximum of whole examination Fee fixed per semester.***

1. **ಶುಲ್ಕ ಪಾವತಿಸಲು ನಿಗದಿಪಡಿಸಿರುವ ದಿನಾಂಕವನ್ನು ಯಾವುದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲ.**
2. ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ವರಮಾನ ರೂ.2.5 ಲಕ್ಷದೊಳಗಿರುವ ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕ, ಭೋಧನಾ ಶುಲ್ಕ, ಪ್ರಮಾಣ ಪತ್ರ ಶುಲ್ಕ, ಅಂಕಪಟ್ಟಿ ಶುಲ್ಕ ಮತ್ತು ಅಂತಿಮ ಪದವಿ ಪ್ರಮಾಣ ಪತ್ರದ ಶುಲ್ಕಗಳನ್ನು ಪಾವತಿಸಿಕೊಳ್ಳಬಾರದೆಂಬ ಆದೇಶದನ್ವಯ, ಅದರಂತೆ ಕ್ರಮ ತೆಗೆದುಕೊಳ್ಳುವುದು.
3. ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕಗಳಲ್ಲಿ Zero Payment ಪಡೆಯಲು ಅರ್ಹರಾಗಿದ್ದರೆ UUCMS Portal ಮುಖಾಂತರ Student Login ನಲ್ಲಿ ಪರೀಕ್ಷಾ ಅರ್ಜಿಯನ್ನು ಕಡ್ಡಾಯವಾಗಿ Submit ಮಾಡುವುದು. ಒಂದು ವೇಳೆ Zero Payment ಎಂದು ಅರ್ಜಿಯನ್ನು Submit ಮಾಡದೇ ಹೋದಲ್ಲಿ ಪ್ರವೇಶ ಪತ್ರವು (Hall Ticket) ಬರುವುದಿಲ್ಲ. ಆದ್ದರಿಂದ Student Login ನಲ್ಲಿ ಪರೀಕ್ಷಾ ಅರ್ಜಿಯು Submit ಆಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು. ಇದನ್ನು ಸಂಬಂಧಪಟ್ಟ ಕಾಲೇಜಿನ ಮುಖ್ಯಸ್ಥರು / ಅಧೀಕ್ಷಕರು / ಗುಮಾಸ್ತರು ಕೂಡ ವಿದ್ಯಾರ್ಥಿಗಳ ಗಮನಕ್ಕೆ ತರುವುದು. ಇದಕ್ಕೆ ವಿಶ್ವವಿದ್ಯಾನಿಲಯವು ಜವಾಬ್ದಾರವಾಗಿರುವುದಿಲ್ಲ. ಪರೀಕ್ಷಾ ಅರ್ಜಿಯನ್ನು Submit ಮಾಡದಿದಲ್ಲಿ ಇತರೇ ವಿದ್ಯಾರ್ಥಿಗಳಿಗೆ ವಿಧಿಸಲ್ಪಡುವ ದಂಡಶುಲ್ಕವು ಈ ವಿದ್ಯಾರ್ಥಿಗಳಿಗೂ ಅನ್ವಯವಾಗುತ್ತದೆ.

## ವಿದ್ಯಾರ್ಥಿಗಳಿಗೆ ಸೂಚನೆಗಳು:

1. ಲಿಖಿತ ಪರೀಕ್ಷೆಗಳಿಗೆ ಸಂಬಂಧಪಟ್ಟ ವಿವರವಾದ ವೇಳಾಪಟ್ಟಿಯನ್ನು ಈ ಕಛೇರಿಯಿಂದ ಮುಂದಿನ ದಿನಗಳಲ್ಲಿ ಕಳುಹಿಸಲಾಗುವುದು.

2. ಪರೀಕ್ಷಾ ಶುಲ್ಕವನ್ನು ಯಾವ ಕಾರಣದಿಂದಲೂ ಮರುಪಾವತಿ ಮಾಡಲಾಗುವುದಿಲ್ಲ ಮತ್ತು ಅದನ್ನು ಮುಂದಿನ ಪರೀಕ್ಷೆಗಳಿಗೂ ಸರಿದೂಗಿಸಿಕೊಳ್ಳಲಾಗುವುದಿಲ್ಲ.
3. **ಭಾವಚಿತ್ರಗಳಿಲ್ಲದ ಹಾಗೂ ಕುಲಸಚಿವರು (ಪರೀಕ್ಷಾಂಗ) ಅಥವಾ ಪ್ರಾಂಶುಪಾಲರ ಸಹಿ/ಮೊಹರು ಇಲ್ಲದ ಪ್ರವೇಶಪತ್ರಗಳನ್ನು ಪರೀಕ್ಷಾ ಕೊಠಡಿಯಲ್ಲಿ ಹಾಜರುಪಡಿಸದ ವಿದ್ಯಾರ್ಥಿಗಳಿಗೆ ಯಾವುದೇ ಕಾರಣಕ್ಕೂ ಕೇಂದ್ರದ ಪರೀಕ್ಷಾ ಮುಖ್ಯಾಧಿಕಾರಿಗಳು/ವಿಶ್ವವಿದ್ಯಾನಿಲಯದ ಅಧಿಕಾರಿಗಳು ಹಾಗೂ ತನಿಖಾಧಿಕಾರಿಗಳು ಪರೀಕ್ಷೆ ತೆಗೆದುಕೊಳ್ಳಲು ಅನುಮತಿ ಕೊಡುವುದಿಲ್ಲ.**

**ಪ್ರಾಂಶುಪಾಲರುಗಳಿಗೆ ಸಾಮಾನ್ಯ ಸೂಚನೆಗಳು:**

1. ಪ್ರಾಯೋಗಿಕ ಪರೀಕ್ಷೆಗಳ ಅಂಕಪಟ್ಟಿಗಳನ್ನು ಮೊಹರು ಮಾಡಿದ ಕವರುಗಳಲ್ಲಿ ಇಟ್ಟು ಕೇಂದ್ರದಲ್ಲಿ ನಡೆಯುವ ಎಲ್ಲಾ ವಿಷಯಗಳ ಪ್ರಾಯೋಗಿಕ (ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ಮುನ್ನ) ಪರೀಕ್ಷೆಗಳು ಮುಗಿದ ಮರು ದಿನವೇ ಕಳುಹಿಸಬೇಕು. ಈ ದಿನಾಂಕ ಮೀರಿಪ್ರಾಯೋಗಿಕ ಪರೀಕ್ಷೆಗಳ ಅಂಕಪಟ್ಟಿಗಳನ್ನು ಕಳುಹಿಸುವಂತಹ ಕಾಲೇಜುಗಳಿಗೆ/ಸಂಸ್ಥೆಗಳಿಗೆ ಸೇರಿದ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶಗಳು ತಡವಾಗಿ ಪ್ರಕಟವಾಗುವ ಸಂಭವವನ್ನು ತಪ್ಪಿಸಲು ಜಾಗರೂಕರಾಗಿರಲು ಕೋರಲಾಗಿದೆ. ಉತ್ತರ ಪತ್ರಿಕೆಗಳ ಕಟ್ಟುಗಳಲ್ಲಿ (Answer Book Bundles) ಅಂಕಪಟ್ಟಿಗಳನ್ನು ಕಳುಹಿಸಬಾರದೆಂದು ಸೂಚಿಸಲಾಗಿದೆ.
2. ವಿದ್ಯಾರ್ಥಿಗಳು ಗೈರುಹಾಜರಾದಲ್ಲಿ ಆ ಪರೀಕ್ಷಾ ದಿನದಂದೇ ಆನ್‌ಲೈನ್ ಮುಖಾಂತರ ಗೈರುಹಾಜರಿಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

23/9/26

ಕುಲಸಚಿವ (ಪರೀಕ್ಷಾಂಗ)

ಗೆ:

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಮೈಸೂರು, ಜಿಲ್ಲೆಯ ಪದವಿ ಕಾಲೇಜುಗಳ (ಮೇಲಿನ ಕೋರ್ಸ್‌ಗೆ ಸಂಬಂಧಪಟ್ಟ ಕಾಲೇಜುಗಳಿಗೆ) ಪ್ರಾಂಶುಪಾಲರುಗಳಿಗೆ.
2. ಉಪಕುಲಸಚಿವರು (ಪರೀಕ್ಷಾಂಗ), ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ನಿರ್ದೇಶಕರು, ICD, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು-ಈ ಅಧಿಸೂಚನೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
4. ಅಧೀಕ್ಷಕರು, ಪರೀಕ್ಷಾ ಸುಧಾರಣಾ ಘಟಕ, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಪರೀಕ್ಷಾ ವಿಭಾಗದ ಎಲ್ಲಾ ಅಧೀಕ್ಷಕರು, ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಎಲ್ಲಾ ಕಾರ್ಯನಿರ್ವಾಹಕರು (ಸಾಮಾನ್ಯ ವಿಭಾಗ ಮತ್ತು ಸ್ನಾತಕ ಪದವಿ ವಿಭಾಗ) ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಮಾನ್ಯ ಕುಲಪತಿಗಳ/ಕುಲಸಚಿವರ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿ ಅವರುಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕಛೇರಿ ಪ್ರತಿ.